ಆ) ಕಾರ್ಕಳ ಜೈನ ಧರ್ಮದ ಅನೇಕ ಪ್ರವಾಸಿ, ತಾಣಗಳ ಕೇಂದ್ರವಾಗಿದ್ದು ಇಲ್ಲಿ ಬಾಹುಬಲಿ ಮೂರ್ತಿಯನ್ನು ನೋಡಲು ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿದ್ದು, ಒಂದು ಯಾತ್ರಿನಿವಾಸದ ಪ್ರಸ್ತಾವನೆ ಇದ್ದು, ಅದು ಯಾವ ಹಂತದಲ್ಲಿದೆ/

**ಕಾರ್ಕಳದಲ್ಲಿ ಯಾತ್ರಿನಿವಾಸವನ್ನು ನಿರ್ಮಿಸಲು ಕ್ರಮಕೈಗೊಂಡಿದೆ. ಜಿಲ್ಲಾಡಳಿತವು ಈ ಯೋಜನೆಯನ್ನು ಹೌಸಿಂಗ್ ಬೋರ್ಡಿಗೆ ವಹಿಸಿರುತ್ತದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಕಾಮಗಾರಿಯನ್ನು ಆರಂಭಿಸಲಾಗಿದೆ. construction of**

ಇ) ಈ ಯಾತ್ರಿ ನಿವಾಸವನ್ನು ನಿರ್ಮಿಸಲು ಬೇಕಾಗುವ ಮೊತ್ತವೆಷ್ಟು ಮತ್ತು ಯಾವಾಗ ನಿರ್ಮಿಸಲಾಗುವುದು?

**ಕಾರ್ಕಳದಲ್ಲಿ ರೂ.93.00 ಲಕ್ಷಗಳ ವೆಚ್ಚದಲ್ಲಿ ಯಾತ್ರಿನಿವಾಸವನ್ನು ನಿರ್ಮಿಸಲಾಗುತ್ತಿದೆ. ಕಾಮಗಾರಿ ಪ್ರಗತಿಯಲ್ಲಿದೆ.**

**252 ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ)**

**ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು.**

ಅ ಕಾರ್ಕಳ ಪುರಸಭೆಯ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಕೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಯಾವ ರೀತಿಯಲ್ಲಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಗುವುದು?

– ಬಂದಿದೆ –

ವ್ಯವಸ್ಥಿತವಾಗಿಕಾರ್ಯನಿರ್ವಹಿಸಲು ಒಳಚರಂಡಿ ಯೋಜನೆಯನ್ನು ಪುನರ್ ನಿರ್ಮಾಣ ಮಾಡಲು ಸರ್ವೆ ಕಾರ್ಯಗಳನ್ನು ಸ್ಥಳೀಯ ಸಂಸ್ಥೆಯು ಕೈಗೆತ್ತಿಕೊಂಡಿದೆ.

ಆ ಈ ಒಳಚರಂಡಿ ಯೋಜನೆಯಿಂದ ಎಷ್ಟು ಬಾವಿಗಳು ಕೆಟ್ಟು ಹೋಗಿವೆ; ಹೊಸ ವಿನ್ಯಾಸದೊಂದಿಗೆ ಒಳಚರಂಡಿಯನ್ನು ಮತ್ತು ಟ್ರೀಟ್‌ಮೆಂಟ್ ಪ್ಲಾಂಟನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಇದಕ್ಕೆ ತಗಲುವ ಹಣವೆಷ್ಟು?

ಒಳಚರಂಡಿ ಯೋಜನೆಯ ತೊಂದರೆಯಿಂದಾಗಿ ಪುರಸಭಾ ವ್ಯಾಪ್ತಿಯಲ್ಲಿ ಎರಡು ಬಾವಿಗಳು ಕೆಟ್ಟು ಹೋಗಿವೆ.

ಕಾರ್ಕಳ ಎರಡನೇ ಹಂತದ ಒಳಚರಂಡಿ ಯೋಜನೆಗೆ ಸರ್ವೆ ಕಾರ್ಯಕ್ಕೆಗೊಂಡು ಅಂದಾಜು ಪಟ್ಟಿ ತಯಾರಿಸಲಾಗುವುದು. ಈ ಯೋಜನೆಗೆ ರೇಖಾ ಅಂದಾಜಿನಂತೆ ಸುಮಾರು ರೂ. 20.00 ಕೋಟಿಗಳ ಹಣ ಅಗತ್ಯವಿದೆಯೆಂದು ಅಂದಾಜಿಸಲಾಗಿದೆ.

ಇ ಕಾರ್ಕಳ ನಗರ ನೀರು ಸರಬರಾಜು ಯೋಜನೆಯ ನೀರಿನ ಟ್ಯಾಂಕ್ ಬಿದ್ದುಹೋಗಿದ್ದು, ಅದನ್ನು ಹೊಸದಾಗಿ ನಿರ್ಮಿಸುವ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲಾಗುವುದೇ?

10 ಲಕ್ಷ ಲೀಟರ್ ಸಾಮರ್ಥ್ಯದ ಒಂದು ಹೊಸ ಮೇಲ್ಮಟ್ಟದ ಜಲ ಸಂಗ್ರಹಾಗಾರವನ್ನು ಕಾರ್ಕಳ ಪುರಸಭಾ ಠೇವಣಿ ಕೊಡಿಗೆ ಆಧಾರದ ಮೇಲೆ ಕೈಗೊಳ್ಳಲಾಗುತ್ತಿದೆ. ಸದರಿ ಕಾಮಗಾರಿಗೆ ರೂ.113.50 ಲಕ್ಷಗಳನ್ನು ಪುರಸಭೆಯು ಮಂಡಳಿಗೆ ಸಂದಾಯ ಮಾಡಿರುತ್ತದೆ.